# ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 712/2023

**ಸಾಕ್ಷಿಯನ್ನು ದಿಃ 21.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಚಿಕ್ಕಸ್ವಾಮಿ | ಸಿಡಬ್ಲ್ಯೂ:16 | ಪಿಡಬ್ಲ್ಯೂ:5 |
| ತಂದೆಯ ಹೆಸರು | ಮರಿಚನ್ನೇಗೌಡ | | |
| ವಯಸ್ಸು | 43 ವರ್ಷ | | |
| ಕೆಲಸ | ಪಿ.ಐ ಬಸವೇಶ್ವರ ನಗರ ಪೊಲೀಸ್ ಠಾಣೆ ಬೆಂಗಳೂರು | | |
| ವಾಸಸ್ಥಳ | ಯಶವಂತಪುರ, ಬೆಂಗಳೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು ದಿಃ 26.06.2022 ರಿಂದ ದಿಃ 09.08.2023 ರ ವರೆಗೆ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪಿ.ಐ.ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 08.08.2023 ರಂದು ಈ ಕಡತವನ್ನು ಚಾಸಾ 14 ರವರಿಂದ ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ. ಅದೆ ದಿನ ಅಪಘಾತಕ್ಕೆ ಒಳಗಾದ ವಾಹನಗಳ ಐ.ಎಂ.ವಿ ವರದಿ ನೀಡುವಂತೆ ಕೋರಿಕೆ ಸಲಿಸಿರುತ್ತೇನೆ. ಹಾಗೂ ಗಾಯಾಳು ಮೃತ ಪಟ್ಟ ಮೇರೆಗೆ ಕಲಂ 337 ಬದಲಾಗಿ 304 ಎ ಅಳವಡಿಸಿಕೊಳ್ಳುವಂತೆ ಮಾನ್ಯ ನ್ಯಾಯಾಲಯಕ್ಕೆ ವರದಿ ಮೂಲಕ ನಿವೇದಿಸಿಕೊಂಡಿರುತ್ತೇನೆ. ಸದರಿ ವರದಿಯನ್ನು ನಿಪಿ. 13 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 13(ಎ) ಎಂದು ಗುರುತಿಸಲಾಯಿತು. ಚಾಸಾ

15 ರವರಿಗೆ ಶವ ಪಂಚನಾಮೆ ಮಾಡುವಂತೆ ನಿರ್ದೇಶಿಸಿರುತ್ತೇನೆ. ನಂತರ ವಾಹನಗಳ ಐ.ಎಂ.ವಿ ವರದಿ ಸ್ವೀಕರಿಸಿ ಅದರ ಮಾಲೀಕರಿಗೆ ಅಂದರೆ ಚಾಸಾ 10 ರವರಿಗೆ ಐ.ಎಂ.ವಿ ಕಲಂ 133 ಅಡಿ ನೋಟೀಸು ನೀಡಿ ಅವರಿಂದ ಉತ್ತರ ಪಡೆದಿರುತ್ತೇನೆ. ನಂತರ ಇಂಡಿಮಿನಿಟಿ ಬಾಂಡ್ ಪಡೆದು ವಾಹನವನ್ನು ಬಿಡುಗಡೆ ಗೊಳಿಸಿರುತ್ತೇನೆ. ಸದರಿ ಐ.ಎಂ.ವಿ ನೋಟೀಸು, ಉತ್ತರ ಮತ್ತು ಇಂಡಿಮಿನಿಟಿ ಬಾಂಡ್ ನಿಪಿ. 14 ರಿಂದ 16 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ. 14(ಎ) ಯಿಂದ 16(ಎ) ಎಂದು ಗುರುತಿಸಲಾಯಿತು. ನಂತರ ಅಪಘಾತ ಪಡಿಸಿದ ವಾಹನ ಚಾಲಕನಿಗೆ ಠಾಣೆಗೆ ಹಾಜರಾದ ಮೇರೆಗೆ ಕಲನ 41 ಸಿ.ಆರ್.ಪಿ.ಸಿ ಅಡಿ ನೋಟೀಸು ಜಾರಿ ಮಾಡಿ ಬಿಡುಗಡೆ ಮಾಡಿರುತ್ತೇನೆ ನನಗೆ ವರ್ಗಾವಣೆ ಅದ ಮೇರೆಗೆ ಚಾಸಾ 17 ರವರಿಗೆ ಕಡತವನ್ನು ವರ್ಗಾಯಿಸಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ.ಎಸ್.ಎಂ.ವಕೀಲರಿಂದಃ</u>**

ವಾಹನದ ಮಾಲೀಕರೆ ಯಾವುದೆ ನೋಟೀಸು ಜಾರಿ ಮಾಡಿಲ್ಲ ಎಂದರೆ ಸರಿಯಲ್ಲ. ಅದರಿಂದ ಯಾವುದೆ ಉತ್ತರ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ನಿರ್ಲಕ್ಷತನನಿಂದ ಅಪಘಾತ ಆಗದಿದ್ದರೂ ಆತನ ಮೇಲೆ ಸುಳ್ಳು ತನಿಖೆ ಕೈಗೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.